**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,ನ್ಯಾಯಾಲಯ ,**

**ಚನ್ನಗಿರಿ .**

**ಸಿಸಿ ನಂ. 503/2023**

| | |
|---|---|
| ಹೆಸರುಃ ಮುಬಾರಕ್ ವುಲ್ಲಾ | ಚಾಸಾಃ 7 |
| ತಂದೆಃ ಜಫರುಲ್ಲಾ | ಪ್ರಾಸಾ: 4 |
| ವಯಸ್ಸುಃ 38 ವರ್ಷ | |
| ಉದ್ಯೋಗಃ ಆಟೋ ಡ್ರೈವರ್ | |
| ವಾಸ ಸ್ಥಳಃ ಹೊನ್ನೆಬಾಗಿ ಗ್ರಾಮ , ಚನ್ನಗಿರಿ ತಾಲ್ಲೂಕು. | |
| ಸಾಕ್ಷಿಗೆ ದಿನಾಂಕಃ 21-07-2025 ರಂದು ಪ್ರಮಾಣ ವಚನ ಭೋಧಿಸಲಾಯಿತು . | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ವಾಹನ ಬಿಡುಗಡೆ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ನಾನು ದಿಃ 15-10-2022 ರಂದು ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಟಾಟಾ ಎ ಸಿ ಕೆಎ/18-ಎ-8523 ನೇ ವಾಹನವನ್ನು ಬಿಡುಗಡೆಮಾಡಿಸಿಕೊಳ್ಳುವ ಸಮಯಕ್ಕೆ ಮಾಡಿರುತ್ತೇನೆ. ಸದರಿ ಸಮಯಕ್ಕೆ ನನ್ನೊಂದಿಗೆ ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯನ್ನು ಸಂಜೆ 4.00 ರಿಂದ 5.00ರವೆಗೆ ಜರುಗಿಸಿರುತ್ತಾರೆ, ಈಗ ನೋಡುತ್ತಿರುವ ಪೊಟೋಗಳಲ್ಲಿ ನಾನು ಇದ್ದೇನೆ, ಸದರಿ ಪೊಟೋಗಳನ್ನು ಈಗಾಗಲೇ ನಿಪಿ-8 ಮತ್ತು 9 ಎಂದು ಗುರುತಿಸಲಾಗಿದೆ. ಸದರಿ ವಾಹನವನ್ನು ನನ್ನ ತಮ್ಮನಾದ ಅಮಾನುಲ್ಲಾರವರಿಗೆ ಬಾಡಿಗೆಗೆ ಕೊಟ್ಟಿರುತ್ತೇನೆ. ಆರೋಪಿತರು ನಮ್ಮ ಗ್ರಾಮದವರು ಮತ್ತು ಪರಿಚಿತರು. ನಾನು ಈ ಪ್ರಕರಣದಲ್ಲಿ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-7 ಮತ್ತು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ**

**ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ನಿಪಿ-7 ಮತ್ತು ಹೇಳಿಕೆಯನ್ನು ನೋಡಲಾಗಿ ಸಾಕ್ಷಿಯು ನಿಪಿ-7 ಮತ್ತು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನಿಪಿ-7ರ ಸಮಯಕ್ಕೆ ಮಹಮ್ಮದ್ ಮುಖ್ತಿಯಾರ್ ಮತ್ತು ಮಹಮ್ಮದ್ ಖಲೀಂವುಲ್ಲಾ ಎನ್ನುವವರು ಹಾಜರಿದ್ದು ಪಂಚನಾಮೆಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-7ರಲ್ಲಿ ನಮೂದಾದ ವಾಹನವನ್ನು ನಾನು ಬಾಡಿಗೆಗೆ ಹಾಗೂ ಸ್ವಂತಕ್ಕೆ ಓಡಿಸಿಕೊಂಡಿರುತ್ತೇನೆ ಎಂದರೆ ಸರಿ. ದಿಃ13-06-2022 ರಂದು ಆರೋಪಿತರು ಸದರಿ ವಾಹನವನ್ನು ನನ್ನಿಂದ ಆಟೋವನ್ನು ಬಾಡಿಗೆಗೆ ಪಡೆದು ಓಡಿಸಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ಸದರಿ ಆಟೋದಲ್ಲಿ ಅಜ್ಜಾಂಪುರದಿಂದ ಮುದಗುಂಡಿ ಗ್ರಾಮಕ್ಕೆ ಹೋಗಿ ರೈತಿರಿಂದ ಕಡಿಮೆ ಬೆಲೆಗೆ 2 ಹೋರಿಗಳನ್ನು ಮತ್ತು ಒಂದು ಬಿಳಿ ಬಣ್ಣದ ಹೋರಿಯನ್ನು ಖರೀದಿಸಿ ಅವನ್ನು ಖಸಾಯಿ ಖಾನೆಗೆ ಸಾಗಿಸಲು ಎಂದು ನನ್ನ ಬಾಬ್ತಾದ ನಿಪಿ-7ರಲ್ಲಿ ಉಲ್ಲೇಖಿತವಾದ ಆಟೋದಲ್ಲಿ ಹಿಂಸಾತ್ಮಕವಾಗಿ ತುಂಬಿಕೊಂಡು ಸಾಗಾಟ ಮಾಡಿಕೊಂಡು ಚನ್ನಗಿರಿ ಕಡೆಗೆ ಬರುತ್ತಿದ್ದರು ಎಂದರೆ ಸರಿ. ನಂತರ ಆರೋಪಿತರ ಮೇಲೆ ಸದರಿ ಪ್ರಕರಣ ದಾಖಲಾಗಿದ್ದು ನಾನು ನನ್ನ ಬಾಬ್ತಾದ ಆಟೋವನ್ನು ನಿಪಿ-7 ರಂತೆ ಬಿಡಿಸಿಕೊಂಡಿರವ ಕುರಿಸು ಹೇಚಿಕ

ನೀಡಿರುತ್ತೇನೆ ಎಂದರೆ ಸರಿ. ಸದರಿ ದಿನಾಂಕದಂದ ನನ್ನ ಆಟೋವನ್ನು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರೇ ಬಾಡಿಗೆಗೆ ಪಡೆದಿದ್ದರು ಎಂದರೆ ಸರಿ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ಎಲ್ ಎನ್ ವಕೀಲರಿಂದ –**

ನಿಪಿ-7 ರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲದೆ ಇದ್ದರು ಸಹ ನಾನು ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**